ಪಕ್ಷದಿಂದ 50-60 ಜನ ಪ್ರತಿನಿಧಿಗಳು ಒಂದು ಸಾರಿ ಅಲ್ಲಿಗೆ ಹೋದಾಗ ಅಲ್ಲಿ ಜಾಗ ಸಿಗುವುದಿಲ್ಲ. ಅದಕ್ಕೋಸ್ಕರ ಹಿಂದಿನ ಸರ್ಕಾರದವರು ಒಂದು ನಿರ್ಣಯವನ್ನು ಮಾಡಿದ್ದಾರೆ. ಅಲ್ಲಿ ಮೂರನೆಯ ಕರ್ನಾಟಕ ಭವನವನ್ನು ತೆಗೆಯಬೇಕೆನ್ನುವಂಥಾದ್ದು. ಅದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಹಣವನ್ನು ಬಿಡುಗಡೆ ಮಾಡಿ ಅದನ್ನೂ ಕೂಡ ಮಾಡುವಂತಹ ನಿರ್ಣಯವನ್ನು ಮಾಡುತ್ತೇವೆ. ಇದರಿಂದ ಸಮಸ್ಯೆ ಬಗೆಹರಿಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಜನತಾದಳದ 115 ಜನರು ಯಾವುದೋ ಒಂದು ರಾಷ್ಟ್ರೀಯ ಕಾನ್ಫರೆನ್ಸ್ ಹೋಗುತ್ತಿದ್ದಾರೆಂದರೆ ತಕ್ಷಣ 115 ರೂಮುಗಳನ್ನು ಎಲ್ಲಿಂದ ತರುವುದು. ಮೊನ್ನೆ ಬಿ.ಜೆ.ಪಿ.ಯ ಎಂ.ಎಲ್.ಎ.ಗಳು ಹೋದರು ಈ ರೀತಿಯಾದಾಗ ಕಷ್ಟವಾಗುತ್ತದೆ. ಸಾಧ್ಯವಾದಷ್ಟು ಮಟ್ಟಿಗೆ ನಾವು ಇರುವಂತಹ ವಸ್ತು ಸ್ಥಿತಿಯಲ್ಲಿ ನಾವು ಅನುಸರಿಸುವಂತಹ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅಲ್ಲಿ ಬೇರೆ ಬೇರೆ ರಾಜ್ಯಗಳ ಭವನಗಳು ಅಲ್ಲ ಇದೆ, ಅವರ ಹತ್ತಿರ ಸ್ವಲ್ಪ ಮಟ್ಟಿಗೆ ಸಹಕಾರದಿಂದ ಸೌಲಭ್ಯಗಳನ್ನು ಕೆಲವು ಸಂದರ್ಭದಲ್ಲಿ ಒದಗಿಸಿಕೊಳ್ಳಬೇಕಾಗುತ್ತದೆ. ಅದು ಸಾಧ್ಯವಿಲ್ಲವೆಂದರೆ ಕೆಲವು ಹೋಟೆಲ್ಗಳಲ್ಲಿ ರೂಮುಗಳನ್ನು ರಿಜರ್ವ್ ಮಾಡುವಂತಹ ಸನ್ನಿವೇಶಗಳು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಈ ರೀತಿ ನಾವು ಮಾಡಿಕೊಂಡು ಹೋಗುತ್ತೇವೆ. ಇನ್ನೊಂದು ವಿಷಯ ಕರ್ನಾಟಕ ಭವನದಲ್ಲಿ ಕೆಲವು ಮಾರ್ಪಾಡು ಆಗಬೇಕಾಗಿದೆ. ಅಲ್ಲಿನ ವ್ಯವಸ್ಥೆ ಸರಿಯಾಗಿದೆ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತಾ ಇಲ್ಲ. ಅದನ್ನೂ ಕೂಡ ಸರಿಪಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ನೀವು ಏನು ಹೇಳಿದ್ದೀರಿ, ಇದು 3,65,138 ರೂಪಾಯಿಗಳು ಬಾಕಿ ಇದೆ. ಅದು ಕೂಡ ಬಹುಶಃ ಸನ್ಮಾನ್ಯ ಸದಸ್ಯರು ವಾಪಸ್ಸು ಕೊಡುತ್ತಾರೆಂದು ನಾನು ಆಶಿಸುತ್ತೇನೆ. ಇದಕ್ಕೆ ಕೆಲವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ : ಈ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕರ್ನಾಟಕ ಭವನವನ್ನು ವ್ಯವಸ್ಥೆ ಮಾಡುವ ಉದ್ದೇಶವೇನಾದರೂ ಸರ್ಕಾರದ ಮುಂದಿದೆಯೆ?

ಅಧ್ಯಕ್ಷರು : ಸಧ್ಯ ಅದರ ಅಗತ್ಯವಿಲ್ಲ.

ಕರ್ನಾಟಕ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಹಣದ ಬಗ್ಗೆ

359 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಮತ್ತು ಇಲ್ಲಿಯವರೆಗೆ ಕರ್ನಾಟಕ ರಾಜ್ಯದ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಸರ್ಕಾರದಿಂದ ಎಷ್ಟು ಹಣ ನಿಗದಿಪಡಿಸಲಾಗಿದೆ?

ಆ) ಇಲ್ಲಿಯವರೆಗೆ ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಇ) ಇಲ್ಲಿಯವರೆಗೆ ವಕ್ಫ್ ಸಂಸ್ಥೆಗಳಿಂದ ಒಟ್ಟು ಬಂದಿರುವಂತಹ ಬೇಡಿಕೆ ಎಷ್ಟು?

ಈ) ವಕ್ಫ್ ಸಂಸ್ಥೆಗಳ ಅಭಿವೃದ್ಧಿಗಾಗಿ ಹಣ ಬಿಡುಗಡೆಯಾಗಿ ಉಳಿದಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ವಕ್ಫ್ ಸಚಿವರು) :

ಅ) 1994-95ನೇ ಸಾಲಿಗೆ ರೂ. 2.00 ಕೋಟಿ ಹಾಗೂ 1995-96ನೇ ಸಾಲಿಗೆ ರೂ. 2.00 ಕೋಟಿಗಳನ್ನು ಸರ್ಕಾರ ನಿಗದಿಪಡಿಸಿದೆ.

ಆ) 1994-95ನೇ ಸಾಲಿಗೆ ರೂ. 2.00 ಕೋಟಿಗಳನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ಈವರೆಗೆ ಮಂಡಳಿಯು ರೂ. 1,52,17,500 ಗಳನ್ನು ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಿದ್ದು, ರೂ. 47,82,500-00 ಉಳಿದಿದೆ. ಸದರಿ ಉಳಿಕೆ ಮೊತ್ತವನ್ನು ನಿಶ್ಚಿತ ಮಾಹಿತಿ ದೊರೆತ ನಂತರ ಬಿಡುಗಡೆ ಮಾಡಲಾಗುವುದು.

ಇ) ವಕ್ಫ್ ಮಂಡಳಿ ಹಾಗೂ ಸರ್ಕಾರಕ್ಕೆ ಇಲ್ಲಿಯವರೆಗೆ 300 ಪ್ರಸ್ತಾವನೆಗಳು ಬಂದಿವೆ.

ಈ) 1994-95 ರೂ. 47,82,500-00 1995-96ರ ಬೇಡಿಕೆಗಳು ಇನ್ನೂ ಪರಿಶೀಲನೆಯಲ್ಲಿದೆ.

Supplementary Note to the Starred L.A. Question No. 359. raised by Sri C.R. Sagir Ahmed, MLA, Chickmagalur.

The Government has sanctioned Rs. 2.00 Crores as Grant-in-Aid to Wakf institutions for the year 1994-95 for repairs and improvements etc. Out of this a sum of Rs. 1,52,17,500/- was released to the grantee institutions who have furnished the required particulars leaying a balance of Rs. 47,82,500-00. The balance grant amount will be released after observing the formalities as envisaged in the Grant-in-Aid Code Rules like Registration of the institutions, receipt of Indemity Bond, Plan Estimate and Accounts etc.

Further, the Grant-in-Aid cheques are being released to the grantee institution through the Chairman, Districts Wakf Committee concerned who is authorised to release the same to the concerned institution and to obtain the Utilisaiton Certificate and the Spot Inspection Report etc.

The Statement showing the Grant-in-Aid released to wakf institutions is appended herein.

STATEMENT SHOWING THE DETAILS OF GRANT-IN-AID SANCTIONED DURING THE YEAR 1994-95, AMOUNT RELEASED AND THE BALANCE AS ON 2.8.1995.

Sl. No.	Name of the District	No. of Insti-tutions	Amount sanctioned	Amount released	Balance	Re-marks
1.	Bangalore	46	21,80,000	16,06,000	5,75,000	
2.	Kolar	61	11,60,000	8,37,500	3,22,500	

3.	Tumkur	23	8,20,000	6,67,600	1,52,500
4.	Shimoga	29	8,70,000	7,80,000	90,000
5.	Chitradurga	34	8,40,000	8,60,000	1,80,000
6.	Mysore	49	12,25,000	10,47,500	82,500
7.	Mandya	18	5,75,000	4,92,500	82,500
8.	Hassan	13	3,70,000	2,19,000	1,60,000
9.	Chikmagalur	24	8,00,000	6,20,000	1,80,000
10.	Kodagu	07	1,75,000	1,65,000	20,000
11.	Dakshina Kannada	57	27,95,000	25,35,000	2,60,000
12.	Belgaum	48	9,30,000	8,00,000	1,30,000
13.	Bijapur	47	11,35,000	10,07,500	1,27,500
14.	Dharwad	44	10,95,000	8,57,500	2,37,500
15.	Uttar Kannada	21	4,85,000	1,27,500	3,57,500
16.	Gulbarga	100	19,35,000	10,95,000	8,40,000
17.	Raichur	33	7,95,000	5,30,000	8,35,000
18.	Bidar	52	11,50,000	8,05,000	3,45,000
19.	Bellary	38	6,65,000	3,85,000	2,80,000
		734	2,00,00,000	1,52,17,500	47,82,500

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಈ ವಕ್ಫ್ ಮಂಡಳಿಯು ಕೆಲವು ಸಂಸ್ಥೆಗಳ ದುರಸ್ಥಿಗಾಗಿ 94-95ನೇ ಸಾಲಿನಲ್ಲಿ ಬಿಡುಗಡೆಯಾದಂಥ ಹಣ ಎರಡು ಕೋಟಿ ರೂಪಾಯಿಗಳಲ್ಲಿ ಖರ್ಚಾಗಿರುವಂಥ ಹಣ ಕೇವಲ ಒಂದು ಕೋಟಿ ಐವತ್ತೆರಡು ಲಕ್ಷ ರೂಪಾಯಿಗಳು ಮಾತ್ರ. ಸುಮಾರು 47 ಲಕ್ಷ ರೂಪಾಯಿಗಳ ಹಣ ಇನ್ನೂ ಸರ್ಕಾರದಲ್ಲಿಯೇ ಉಳಿದಿದೆ. 1995-96ನೇ ಸಾಲಿಗೆ ಬಿಡುಗಡೆಯಾಗಬೇಕಾದಂಥ ಹಣ ಇನ್ನೂ ಬಿಡುಗಡೆಯಾಗಿಲ್ಲ. ಜೊತೆಗೆ ನನಗೆ ಅನಿಸುವುದೇನೆಂದರೆ ಅಧ್ಯಕ್ಷರೆ, ಮಾನ್ಯ ಮುಂತ್ರಿಯವರು ಉತ್ತರ ಕೊಡುವಂಥ ಈ ಸಂದರ್ಭದಲ್ಲಿ 47 ಲಕ್ಷದ 82 ಸಾವಿರ ರೂಪಾಯಿಗಳು ಬಾಕಿ ಉಳಿಯುವುದಕ್ಕೆ ಕಾರಣ ಏನು ಎಂಬುದು ಗೊತ್ತಾಗಬೇಕು. ಎರಡನೆಯದು, ಮತೀಯ ಅಲ್ಪಸಂಖ್ಯಾತರ ಮೇಲೆ ವಿಶ್ವಾಸವಿಟ್ಟಿರುವಂಥ ನಮ್ಮ ವಕ್ಫ್ ಮಂಡಳಿಯ ಸಚಿವರು 94-95ನೇ ಸಾಲಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ಇಷ್ಟು ವಿಳಂಬ ಮಾಡಿದಾಗ, 95-96ನೇ ಸಾಲಿಗೆ ಬಿಡುಗಡೆಯಾದಂಥ ಹಣ ಯಾವಾಗ ಈ ಸಂಸ್ಥೆಗಳ ಉದ್ಧಾರಕ್ಕಾಗಿ ಬಿಡುಗಡೆ ಮಾಡುತ್ತಾರೆ ಎಂಬುದರ ಬಗ್ಗೆ ಅವರು ದಯಮಾಡಿ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಆರ್. ರೋಷನ್ ಬೇಗ್ : ಕೆಲವು ಕ್ರಮಗಳನ್ನು ನಾವು ಅನುಸರಿಸಬೇಕಾಗುತ್ತದೆ, ಡಿಸ್ಟ್ರಿಕ್ ಕಮಿಟಿಯಿಂದ ಪಟ್ಟಿ ಬರಬೇಕು, ಅದನ್ನು ನೋಡಿ ನಾವು ಫೈನಲೈಜ್ ಮಾಡುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಈ ಖಾತೆಯನ್ನು ಹೊಂದಿ, ಕರ್ನಾಟಕ ರಾಜ್ಯದ ಜನತೆಯ ಸೇವೆಯನ್ನು ಮಾಡುವಂಥ ಒಂದು ಅವಕಾಶ ನನಗೆ ದೊರೆತಿತ್ತು. ನಾನು ಮಾನ್ಯ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಅವರು ನನಗೆ ತಪ್ಪು ಮಾಹಿತಿಯನ್ನು ಕೊಡುವ ಅಗತ್ಯ ಇಲ್ಲ, ಕಾರಣ ಏನು ಎಂದು ಹೇಳಿದರೆ ತಾವು ಕೊಡುತ್ತಾ ಇರುವಂಥದ್ದು ಅನುದಾನ ಎಂದು ಏನು ಹೇಳುತ್ತೀರಿ, ಅದರ ಅಭಿವೃದ್ಧಿಗೆ, ಅದರ ದುರಸ್ಥಿಗಾಗಿ ನೀಡುತ್ತಿರುವಂಥ ಅನುದಾನ ಇದು. ಇದರಲ್ಲಿ ತಾವು ಆರ್ಕಿಟೆಕ್ಚರ್, ಪ್ಲಾನ್, ಲೈಸೆನ್ಸ್, ಈ ಎಲ್ಲಾ ವೀಕ್ಷಣೆ ಮಾಡುವಂಥದ್ದರ ಬಗ್ಗೆ ತಮಗೆ ಅಧಿಕಾರ ಇಲ್ಲದಿದ್ದರೂ, ತಾವು ನೀಡಬೇಕಾದಂಥ ಹಣ ಆ ಸಂಸ್ಥೆಗಳಿಗೆ ನೀಡಿದರೆ ಆಗಲಾದರೂ ಸಮಸ್ಯೆಗಳ ಜೀರ್ಣೋದ್ಧಾರ ಆಗುತ್ತದೆ ಎಂದು ನಾನಂತೂ ನಂಬಿದ್ದೇನೆ.

ಅಧ್ಯಕ್ಷರು : ನೀವು ಹಿರಿಯರಿದ್ದೀರಿ, ನೀವು ಅವರಿಗೆ ಗೈಡ್ ಮಾಡಿ, ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ನೀವು ಗೈಡ್ ಮಾಡಿದರೆ .....

ಶ್ರೀ ಸಿ.ಆರ್. ಸಗೀರ್ ಅಹಮದ್ : ಅದರ ಜೊತೆಗೆ ಮಾನ್ಯ ಅಧ್ಯಕ್ಷರೆ, 95-96ನೇ ಸಾಲಿಗೆ ಹಣ ಇದುವರೆಗೂ ಬಿಡುಗಡೆಯಾಗಿಲ್ಲ, ನಾವು ಈಗಾಗಲೇ 95-96ನೇ ಸಾಲಿನ ನಾಲ್ಕು ತಿಂಗಳುಗಳನ್ನು ಕಳೆದು ಆಗಿದೆ. ಜೊತೆಗೆ ಸರ್ಕಾರದವರು ಈ ಹಣವನ್ನು ಯಾವಾಗ ಈ ಸಂಘ ಸಂಸ್ಥೆಗಳಿಗೆ ಬಿಡುಗಡೆ ಮಾಡಿಕೊಡುತ್ತಾರೆ ದಯಮಾಡಿ ತಿಳಿಸಬೇಕು.

ಅಧ್ಯಕ್ಷರು : ನೀವು ಮತ್ತು ಶ್ರೀ ಕಮರಲ್ ಇಸ್ಲಾಂರವರು ಎಲ್ಲರೂ ಸೇರಿ ಗೈಡ್ ಮಾಡಿ.

ಶ್ರೀ ಆರ್. ರೋಷನ್‌ಬೇಗ್ : ಈ ತಿಂಗಳ ಕೊನೆಯಲ್ಲಿ ನಾವು ಲಿಸ್ಟನ್ನು ರಿಲೀಜ್ ಮಾಡುತ್ತೇವೆ.

ಗುಲ್ಬರ್ಗಾದಲ್ಲೊಂದು ಮಹಿಳಾ ಪೋಲೀಸ್ ಠಾಣೆ

658 - ಶ್ರೀ ಕುಮರುಲ್ ಇಸ್ಲಾಂ (ಗುಲ್ಬರ್ಗಾ) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾದಲ್ಲಿ ಮಹಿಳಾ ಪೋಲೀಸ್ ಠಾಣೆಯನ್ನು ಪ್ರಾರಂಭಿಸಲು ಸರ್ಕಾರವು ತೆಗೆದುಕೊಂಡಿರುವ ನಿರ್ಣಯ ನಿಜವೇ?

ಆ) ಹಾಗಿದ್ದಲ್ಲಿ, ಮೇಲಿನ ಪೋಲೀಸ್ ಠಾಣೆಯನ್ನು ದಿ: 15.8.95ರ ಮೊದಲು ಪ್ರಾರಂಭಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು):

ಅ) ಹೌದು.

ಆ) ಈ ಪೋಲೀಸ್ ಠಾಣೆಯನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

SRI QUMARUL ISLAM : Hon. Minister has said that action is being taken to start the police station as early as possible. In this House, you have